**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 22/2024**

**ಪಿ ಡಬ್ಲ್ಯೂಃ1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 19.03.2025**

**ಮುಂ. ಪಾಟೀ ಸವಾಲುಃಶ್ರೀ ಕೆ ಎಮ್ ಎಲ್ ವಕೀಲರಿಂದ 1 ನೇ ಪ್ರತಿವಾದಿ ಪರ ವಕೀಲರುಃ**

3. ನನ್ನ ಅಜ್ಜ ದಾದೇಖಾನ ಇವರಿಗೆ ಐದು ಗಂಡು ಜನ ಮಕ್ಕಳು ಹಾಗೂ ಮೂರು ಹೆಣ್ಣು ಮಕ್ಕಳು, ಅವರುಗಳ ಹೆಸರು ಮಹ್ಮದಖಾನ, ರಸೂಲಖಾನ, ಹುಸೇನಖಾನ, ಗುಲಾಬಖಾನ, ಹಬೀಬಿ, ಅಶ್ರಫ ಹಾಗೂ ಕಾತುಂಬಿ ಆಗಿರುತ್ತಾರೆ. ಈಗ ನಾನು ಹೆಸರು ಹೇಳಿದ ಎಲ್ಲಾ ವ್ಯಕ್ತಿಗಳು ಜೀವಂತ ಇದ್ದಾರೆ ಎಂದರೆ ಸರಿಯಲ್ಲ.

4. ದಾದೇಖಾನ ಇವರ ಮಗ ಹುಸೇನಖಾನ ಇವರ ಮಕ್ಕಳು ಈ ದಾವೆಯ ಪ್ರತಿವಾದಿಗಳು ಎಂದರೆ ಸರಿ. ಹುಸೇನಖಾನ ಇವರ ಸಹೋದರ ಗುಲಾಬಖಾನ ಇವರ ಮಗ ನಾನು ಎಂದರೆ ಸರಿ. ಈಗ ದಾಖಲಿಸಿದ ದಾವೆಯ ದಾವಾ ಆಸ್ತಿ ದಾದೇಖಾನ ಇವರಿಂದ ಬಂದ ಆಸ್ತಿ ಎಂದರೆ ಸರಿ.

5. ನನ್ನ ತಂದೆ ಗುಲಾಬಖಾನ ಇವರು ಹುಬ್ಬಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ತಂದೆ ಹುಬ್ಬಳ್ಳಿಯಲ್ಲಿಯೆ ತೀರಿಕೊಂಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು

ಮತ್ತು ನನ್ನ ತಂದೆ ಇಬ್ಬರು ಹುಬ್ಬಳ್ಳಿಯೆ ಕೂಡಿ ಇದ್ದೇವು ಎಂದರೆ ಸರಿ. ನನ್ನ ತಂದೆ ಗುಲಾಬಖಾನಗೆ ನಾವು ಇಬ್ಬರು ಗಂಡು ಮಕ್ಕಳು ಹಾಗೂ ಐದು ಜನ ಹೆಣ್ಣು ಮಕ್ಕಳು, ಅವರು ಹೆಸರುಗಳನ್ನು ಈಗಾಗಲೇ ಹೇಳಿರುತ್ತೇನೆ. ಈ ದಾವಾ ಆಸ್ತಿಗೆ ನನ್ನ ತಂದೆ ಗುಲಾಬಖಾನನ ಎಲ್ಲಾ ಮಕ್ಕಳಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿ.

6. ಈ ದಾವೆಯಲ್ಲಿ ನಾನು ನನ್ನ ಅಕ್ಕ ತಂಗಿಯರು ಮತ್ತು ಅಣ್ಣ ತಮ್ಮಂದಿರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನನ್ನ ತಂದೆ ಹುಬ್ಬಳ್ಳಿಯಲ್ಲಿ ವಾಸವಾಗಿ ಅವರ ಆಯುಷ ಅಲ್ಲೇ ಕಳೆದು ಅವರು ಅಲ್ಲೇ ಮರಣ ಹೊಂದಿರುತ್ತಾರೆ ಎಂದರೆ ಸರಿ. ಹುಬ್ಬಳ್ಳಿಯಲ್ಲಿ ನಿಮಗೆ ಸ್ವಂತ ಮನೆ ಇದಿಯಾ ಎಂದರೆ ಸಾಕ್ಷಿ ಈಗ ಖರೀದಿಸಿದ್ದೇವೆ ಎಂದು ನುಡಿಯುತ್ತಾರೆ. ಸುಮಾರು 30 ರಿಂದ 40 ವರ್ಷಗಳ ಹಿಂದಿನಿಂದ ಇಲ್ಲಿಯವರೆಗೂ ನಾನು ಮತ್ತು ನನ್ನ ತಂದೆ ಹುಬ್ಬಳ್ಳಿಯಲ್ಲಿ ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇವು ಎಂದರೆ ಸರಿ. ಈಗಲೂ ಸಹ ನಾನು ಹುಬ್ಬಳ್ಳಿಯಿಂದ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾನು ಹುಬ್ಬಳ್ಳಿಯಿಂದ ಕುಂದಗೋಳಕ್ಕೆ ಹೋಗು ಬರು ಮಾಡುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ನಾನು ಸಂಪೂರ್ಣ ಅಪರಿಚಿತ ಎಂದರೆ ಸರಿಯಲ್ಲ.

7. ಪ್ರತಿವಾದಿಯರ ತಂದೆ ಹಾಗೂ ನನ್ನ ಚಿಕ್ಕಪ್ಪ ಹುಸೇನಖಾನ ಇವರು ಯಾವಾಗ ತೀರಿಕೊಂಡಿದ್ದು ಅಂತ ನಿಖರವಾಗಿ ಹೇಳಲಾಗುವುದಿಲ್ಲ. ನನ್ನ ತಂದೆ ಗುಲಾಬಖಾನ ಇವರು 1997 ರಲ್ಲಿ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಯ ಪ್ರಸ್ತುತ ಸ್ಥಿತಿ ನಿಪಿಃ2 ಮತ್ತು 3 ರಲ್ಲಿ ಕಾಣುವಂತೆ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಪ್ರಸ್ತುತ ನಿಪಿಃ4 ಮತ್ತು 5 ರಲ್ಲಿ ಕಾಣುವ ರೀತಿಯಲ್ಲಿಯೂ ಸಹ ಈಗ ಪ್ರಸ್ತುತವಾಗಿ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ದಾವಾ ಆಸ್ತಿಯ ಪ್ರಸ್ತುತ ಸ್ಥಿತಿ ನಿಪಿಃ6 ರಂತೆಯೂ ಸಹ ಇರುವುದಿಲ್ಲ ಎಂದರೆ ಸರಿ. ನಿಪಿಃ2 ರಿಂದ 6 ಪೋಟೋಗಳು ದಾವಾ ಆಸ್ತಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತಿಗೂ ದಾವಾ ಆಸ್ತಿ ಕಡೆಗೆ ಹೋಗಿ ಅದನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ.

8. ನಾನು ಹಾಜರುಪಡಿಸಿದ ಸಿಡಿ ನಿಪಿಃ7 ರಲ್ಲಿ ನಿಪಿಃ2 ರಿಂದ 6 ಪೋಟೋಗಳು ಇರುತ್ತವೆ. ನಿಪಿಃ9 ರಶೀದಿ ಪ್ರಕಾರ ಡಿಸೈನ್ ಮ್ಯಾಟ್ರಿಕ ಪೋಟೋ ಸ್ಟುಡಿಯೋ ಇದೆ ಎಂದರೆ ಸರಿ. ಕುಂದಗೋಳದಲ್ಲಿ ಪೋಟೋ ಸ್ಟುಡಿಯೋಗಳು ಇವೆ ಎಂದರೆ ಸರಿ. ನಿಪಿಃ2 ರಿಂದ 7 ಪೋಟೋ ಮತ್ತು ಸಿಡಿಯನ್ನು ನೀಡಿದವರು ನನಗೆ ಬೇಕಾದ ವ್ಯಕ್ತಿ ಆಗಿರುತ್ತಾರೆ ಎಂದರೆ

ಸರಿಯಲ್ಲ.

9. ಈಗಲೂ ಸಹ ಪ್ರತಿವಾದಿ 1 ರಿಂದ 3 ರವರು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 2ನೇ ಪ್ರತಿವಾದಿ ಮಾತ್ರ ವಾಸವಾಗಿರುತ್ತಾನೆ. 2ನೇ ಪ್ರತಿವಾದಿಯನ್ನು ಹೊರತುಪಡಿಸಿ ದಾವಾ ಆಸ್ತಿಯಲ್ಲಿ ಬೇರೆ ಯಾರು ವಾಸವಾಗಿರುವುದಿಲ್ಲ. ನನಗೆ ಈ ದಾವೆ ದಾಖಲಿಸಲು ಯಾವುದೇ ದಾವಾ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ**